# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಅಅ/ಟಿ.ವಿ.ಸಿ.ಸಿ./ಜಿಎಲ್/41/ಪೂ/09-10

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕ: 15/06/2009.

16-6-09

ರವರಿಗೆ,
ಕಾರ್ಯಪಾಲಕ ಅಭಿಯಂತರರು(ವಿ),
ಸೆಂಟ್ರಲ್ ವಿಭಾಗ, ಬೆಸ್ಕಾಂ,
13ನೇ ಅಡ್ಡ ರಸ್ತೆ, ಮಾರ್ಗೋಸ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-03.

ವಿಷಯ: ವಾರ್ಡ್ ಸಂಖ್ಯೆ-99 ರ, 2ನೇ ಮುಖ್ಯ ರಸ್ತೆ, ಬಿ.ಕೆಂಪಣ್ಣ ಮತ್ತು ಬ್ರದರ್ಸ್ ಬಡಾವಣೆ ಪ್ಯಾಲೇಸ್ ಗುಟ್ಟಹಳಿ ಸ್ವತ್ತಿನ ಸಂಖ್ಯೆ-3(ಹಳೆ ಸಂಖ್ಯೆ 48/3) ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: EE/CD/AEE(T)/ AE-2 / 932-33, ದಿನಾಂಕ: 05/06/2009.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ-161 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರ ನೀಡಲು ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 08/06/2009 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 10/06/2009 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.-ಪೂರ್ವ) ರವರು ಪರಿವೀಕ್ಷಿಸಿರುತ್ತಾರೆ. ಸದರಿ ಸ್ವತ್ತಿನಲ್ಲಿ ವಸತಿ ಉಪಯೋಗಕ್ಕಾಗಿ, ಸ್ಟಿಲ್ಟ್, ನೆಲ, ಮೊದಲನೇಯ ಮತ್ತು ಎರಡನೇಯ ಅಂತಸ್ತುಗಳ ವಸತಿ ಅಪಾರ್ಟ್‌ಮೆಂಟ್ ಕಟ್ಟಡ ನಿರ್ಮಿಸಲು ಸಹಾಯಕ ನಿರ್ದೇಶಕರು (ನಗರ ಯೋಜನೆ-ಪೂರ್ವ) ರವರು (ಎಲ್‌ಪಿ ಸಂಖ್ಯೆ.276-2005/06) ದಿನಾಂಕ: 27/06/2005 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುವುದಾಗಿ,ಕಟ್ಟಡದ ನಿರ್ಮಾಣ ಕಾರ್ಯವು ಪ್ರಗತಿ ಹಂತದಲ್ಲಿದ್ದು, ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ನಡುಜಾಗಗಳನ್ನು ಕಡಿಮೆ ಬಿಟ್ಟಿದ್ದು (ಉಲ್ಲಂಘನೆ ಸರಾಸರಿ ಶೇ 55.37 ರಷ್ಟು) ಮುಂಭಾಗ ಮತ್ತು ಹಿಂಭಾಗದಲ್ಲಿ ಎಲ್ಲಾ ರೂಫ್‌ಗಳನ್ನು ಮುಂಚಾಚಲಾಗಿದೆ ಹಾಗೂ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕಟ್ಟಡಕ್ಕೆ ಪಡೆದಿರುವುದಿಲ್ಲವೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ಕಟ್ಟಡವನ್ನು ಮಂಜೂರಾತಿ ನಕ್ಷೆಯಂತೆ ನಿರ್ಮಾಣ ಮಾಡದೇ ಕಟ್ಟಡ ಉಪವಿಧಿಗಳ ಉಲ್ಲಂಘನೆ ಮಾಡಿರುವುದರಿಂದ, ಈ ಕಟ್ಟಡವು ಮಂಜೂರಾತಿ ನಕ್ಷೆ/ಕಟ್ಟಡ ಉಪವಿಧಿಗಳಿಗೆ ಅನ್ವಯಿಸುವಂತೆ ಸುರಕ್ಷಿತವಾಗಿರುವುದಿಲ್ಲ. ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸಲು ಕೆ.ಎಂ.ಸಿ ಕಾಯ್ದೆ ಅನ್ವಯ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರಿಗೆ ಸೂಚಿಸಲಾಗಿರುತ್ತದೆ. ಆದ್ದರಿಂದ ಈ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

15/6/09
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

1. ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಹೆಬ್ಬಾಳ) ರವರಿಗೆ ಕಳುಹಿಸುತ್ತಾ ಸದರಿ ಕಟ್ಟಡದಲ್ಲಿನ ಅನಧಿಕೃತ ನಿರ್ಮಾಣ/ಕಟ್ಟಡದ ಉಪವಿಧಿಗಳಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಭಾಗಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆ 1976 ಅನ್ವಯ ತೆಗೆದುಕೊಂಡ ಕ್ರಮಗಳ ಬಗೆಗಿನ ದಾಖಲೆಗಳನ್ನು ವಿವರವಾದ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ.

MF

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್/28/ಪೂ/09–10

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 01/06/2009.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಅಧಿಕ ಕೇಂದ್ರ ವಿಭಾಗ, ಬೆಸ್ಕಾಂ,
ಯು.ಎ.ಎಸ್. ಕ್ಯಾಂಪಸ್, ಹೆಬ್ಬಾಳ,
ಬೆಂಗಳೂರು–24.

ವಿಷಯ: ವಾರ್ಡ್ ಸಂಖ್ಯೆ–99 ರ, 1ನೇ ಬ್ಲಾಕ್, ಆರ್.ಎಂ.ವಿ. 2ನೇ ಹಂತ, ಸ್ವತ್ತಿನ ಸಂಖ್ಯೆ–161ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: EEE/ACD/AEE(O)/2009-10 / 919, ದಿನಾಂಕ: 18/05/2009.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–161 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರ ನೀಡಲು ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 21/05/2009 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 29/05/2009 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–ಪೂರ್ವ) ರವರು ಪರಿವೀಕ್ಷಿಸಿರುತ್ತಾರೆ. ಸದರಿ ಸ್ವತ್ತಿನಲ್ಲಿ ವಸತಿ ಉಪಯೋಗಕ್ಕಾಗಿ ಬೇಸ್‌ಮೆಂಟ್, ನೆಲ, ಮೊದಲನೇಯ ಮತ್ತು ಎರಡನೇಯ ಅಂತಸ್ತುಗಳು ಇರುವ ಕಟ್ಟಡ ನಿರ್ಮಿಸಲು ಆಯುಕ್ತರು (ಬಿ.ಡಿ.ಎ) ರವರು (ಎಲ್‌ಪಿ ಸಂಖ್ಯೆ.106–96/97) ದಿನಾಂಕ: 06/03/1997 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುವುದು ಕೋರಿಕೆ ಪತ್ರದೊಂದಿಗೆ ಲಗತ್ತಿಸಿರುವ ಜೆರಾಕ್ಸ್ ಪ್ರತಿಯ ನಕ್ಷೆಯಿಂದ ತಿಳಿದು ಬಂದಿರುವುದಾಗಿ, ಕಟ್ಟಡದ ನಿರ್ಮಾಣ ಕಾರ್ಯವು ಮುಗಿಯುವ ಹಂತದಲ್ಲಿದ್ದು, ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ನಡುಜಾಗಗಳನ್ನು ಕಡಿಮೆ ಬಿಟ್ಟಿದ್ದು (ಉಲ್ಲಂಘನೆ ಸರಾಸರಿ ಶೇ 17.85% ರಷ್ಟು) ಬೇಸ್‌ಮೆಂಟ್ ಅಂತಸ್ತಿನ ಭಾಗಶಃ ಭಾಗವನ್ನು ಅನಧಿಕೃತವಾಗಿ ಮಾರ್ಪಾಡು ಮಾಡಿರುವುದಾಗಿ ಹಾಗೂ ಪ್ರಾರಂಭಿಕ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ಈ ಕಟ್ಟಡಕ್ಕೆ ಪಡೆದಿರುವುದಿಲ್ಲವೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ಕಟ್ಟಡವನ್ನು ಮಂಜೂರಾತಿ ನಕ್ಷೆಯಂತೆ ನಿರ್ಮಾಣ ಮಾಡದೇ ಕಟ್ಟಡ ಉಪವಿಧಿಗಳ ಉಲ್ಲಂಘನೆ ಮಾಡಿರುವುದರಿಂದ, ಈ ಕಟ್ಟಡವು ಮಂಜೂರಾತಿ ನಕ್ಷೆ/ಕಟ್ಟಡ ಉಪವಿಧಿಗಳಿಗೆ ಅನ್ವಯಿಸುವಂತೆ ಸುರಕ್ಷಿತವಾಗಿರುವುದಿಲ್ಲ. ವ್ಯತಿರೀಕ್ತ ಭಾಗಗಳನ್ನು ತೆರುವುಗೊಳಿಸಲು ಕೆ.ಎಂ.ಸಿ ಕಾಯ್ದೆ ಅನ್ವಯ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರಿಗೆ ಸೂಚಿಸಲಾಗಿರುತ್ತದೆ. ಆದ್ದರಿಂದ ಈ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

Executive Engineer, Central Dn, BESCOM, Bangalore-24
From No. 955
Dt. 1/06/09

S. Prabhu 1/6/09
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

1. ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಹೆಬ್ಬಾಳ) ರವರಿಗೆ ಕಳುಹಿಸುತ್ತಾ ಸದರಿ ಕಟ್ಟಡದಲ್ಲಿನ ಅನಧಿಕೃತ ನಿರ್ಮಾಣ/ಕಟ್ಟಡದ ಉಪವಿಧಿಗಳಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಭಾಗಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆ 1976 ಅನ್ವಯ ತೆಗೆದುಕೊಂಡ ಕ್ರಮಗಳ ಬಗೆಗಿನ ದಾಖಲೆಗಳನ್ನು ವಿವರವಾದ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ.

Mf.